ಐ.ಸಿ.ಎ.ಆರ್.-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ,ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

## ತ್ರೈಮಾಸಿಕ ಸುದ್ದಿ ಪತ್ರಿಕೆ

ಸಂಪುಟ-2 ಎಪ್ರಿಲ್ – ಜೂನ, 2017 ತ್ರೈಮಾಸಿಕ ಪತ್ರಿಕೆ ಸಂಚಿಕೆ-2

## ಗೋಡಂಬಿ ಬೇಸಾಯ ಕುರಿತು ವಿಚಾರ ಗೋಷ್ಠಿ



ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯಲ್ಲಿ ಗೋಡಂಬಿ ಹಾಗೂ ಕೊಕೊ ಬೆಳೆ ಅಭಿವೃದ್ಧಿ ನಿರ್ದೇಶನಾಲಯ, ಕೋಚಿನ್ ಇವರ ಸಹಯೋಗದೊಂದಿಗೆ ದಿನಾಂಕ 08-05-2017 ರಂದು ಜಿಲ್ಲಾ ಮಟ್ಟದ "ಗೋಡಂಬಿ ಬೆಳೆಯ ವಿಚಾರ ಸಂಕಿರಣ"ವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ॥ ವೆಂಕಟೇಶ ಹುಬ್ಬಳ್ಳಿ, ನಿರ್ದೇಶಕರು, ಗೋಡಂಬಿ ಹಾಗೂ ಕೊಕೊ ಬೆಳೆ ಅಭಿವೃದ್ಧಿ ನಿರ್ದೇಶನಾಲಯ, ಕೋಚಿನ್ ಇವರು ಮಾತನಾಡಿ ದೇಶದಲ್ಲಿ 10 ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ ಗೋಡಂಬಿ ಬೆಳೆಯನ್ನು ಬೆಳೆಯಲಾಗುತ್ತಿದ್ದು, ಸುಮಾರು 8 ಲಕ್ಷ ಟನ್ ಕಚ್ಚಾ ಬೀಜದ ಉತ್ಪಾದನೆ ಆಗುತ್ತದೆ ಎಂದು ತಿಳಿಸಿದರು. ದೇಶದಲ್ಲಿ ಸುಮಾರು 4000 ಗೋಡಂಬಿ ಬೀಜದ ಸಂಸ್ಕರಣಾ ಘಟಕಗಳಿದ್ದು, ಅವುಗಳ ಸಂಸ್ಕರಣಾ ಬೇಡಿಕೆ 16 ಲಕ್ಷ ಟನ್ ಇದೆ ಎಂದು ಹೇಳಿದರು. ಮುಂದುವರೆದು ಮಾತನಾಡಿದ ಅವರು ಸುಮಾರು 8000 ಕೋಟಿ ರೂಪಾಯಿ ಮೌಲ್ಯದ ಕಚ್ಚಾ ಬೀಜವನ್ನು ಸಂಸ್ಕರಣೆಗಾಗಿ ಹೊರರಾಷ್ಟ್ರದಿಂದ ತರಿಸಲಾಗುತ್ತಿದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ದೇಶದಲ್ಲಿ ಗೋಡಂಬಿ ಬೆಳೆ ಉತ್ಪಾದನೆ ಹಾಗೂ ಮಾರುಕಟ್ಟೆಗೆ ಸಾಕಷ್ಟು ಅವಕಾಶಗಳಿದ್ದು, ರೈತರು ಗೋಡಂಬಿ ಬೇಸಾಯ ಕೈಗೊಳ್ಳಬೇಕೆಂದು ತಿಳಿಸಿದರು. ಗೋಡಂಬಿ ನಿರ್ದೇಶನಾಲಯ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.20,000-40,000 ಸಹಾಯಧನವನ್ನು ಕೊಡುತ್ತಿದ್ದು, ರೈತರು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು.





ಕಾರ್ಯಕ್ರಮದ ಉದ್ಘಾಟನೆಯನ್ನು ಡಾ॥ ಎಸ್.ಆಯ್.ಹನುಮಶೆಟ್ಟಿ, ನಿವೃತ್ತ ಡೀನ್, ತೋಟಗಾರಿಕೆ ವಿಶ್ವ ವಿದ್ಯಾಲಯ, ಬಾಗಲಕೋಟಿ ಇವರು ನೆರವೇರಿಸಿ, ಗೋಡಂಬಿ ಬೆಳೆ ಉತ್ಪಾದನೆ ತಾಂತ್ರಿಕತೆ, ಕೀಟ ಹಾಗೂ ರೋಗಗಳ ನಿರ್ವಹಣೆ, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು.

ಪ್ರಾರಂಭದಲ್ಲಿ ಕೆವಿಕೆ ಮುಖ್ಯಸ್ಥರಾದ ಡಾ॥ ಎಲ್.ಜಿ. ಹಿರೇಗೌಡರ ಪ್ರಾಸ್ತಾವಿಕವಾಗಿ ಮಾತನಾಡಿ,

**ಈ ಸಂಚಿಕೆಯಲ್ಲಿ ಏನಿದೆ?**


- ಗೋಡಂಬಿ ಬೇಸಾಯ ವಿಚಾರ ಗೋಷ್ಠಿ
- ವಿಶ್ವ ಪರಿಸರ ದಿನಾಚರಣೆ
- ಸಿರಿಧಾನ್ಯ ಮೇಳ
- ನೈಸರ್ಗಿಕ ಕೃಷಿ ಕಾರ್ಯಾಗಾರ ಹಾಗೂ ಬೀಜ ದಿನೋತ್ಸವ
- ಕ್ಷೇತ್ರ ಪ್ರಯೋಗಗಳು ಹಾಗೂ ಪ್ರಾತ್ಯಕ್ಷಿಕೆಗಳು
- ಜಿಲ್ಲೆಯ ರೈತರಿಗೆ ದೊರೆತ ಪ್ರಶಸ್ತಿಗಳು

ಕೆವಿಕೆ ಮುಖಾಂತರ ಈಗಾಗಲೇ ಗದಗ ಜಿಲ್ಲೆಯಲ್ಲಿ ಮಾವಿನ ಬೆಳೆಯನ್ನು ಸುಮಾರು 5000 ಎಕರೆ ಕ್ಷೇತ್ರದಲ್ಲಿ ಯಶಸ್ವಿಯಾಗಿ ವಿಸ್ತರಿಸಲಾಗಿದ್ದು, ಈಗ ಗೋಡಂಬಿ ಬೆಳೆಯನ್ನು ಪರ್ಯಾಯ ಬೆಳೆಯನ್ನಾಗಿ ಉತ್ತೇಜಿಸಲಾಗುತ್ತಿದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ಕೆವಿಕೆಯು ಗೋಡಂಬಿ ಅಭಿವೃದ್ಧಿ ನಿರ್ದೇಶನಾಲಯ, ಕೋಚಿನ ಇವರ ಸಹಯೋಗದೊಂದಿಗೆ 2017-18 ಸಾಲಿನಲ್ಲಿ ಸುಮಾರು 1250 ಎಕರೆ ಕ್ಷೇತ್ರದಲ್ಲಿ ಗೋಡಂಬಿ ಬೆಳೆಯನ್ನು ವಿಸ್ತರಿಸುವ ಯೋಜನೆಯನ್ನು ಹೊಂದಿರುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಶ್ರೀ ಕಾಶೀನಾಥ ಭದ್ರಣ್ಣವರ ಅವರು ಗೋಡಂಬಿ ಬೆಳೆ ಪ್ರೋತ್ಸಾಹಿಸಲು ಇಲಾಖೆಯಲ್ಲಿರುವ ಯೋಜನೆ ಬಗ್ಗೆ ರೈತರಿಗೆ ಮಾಹಿತಿ ನೀಡಿದರು.

ಪ್ರಗತಿಪರ ರೈತರಾದ ಶ್ರೀ ಈಶ್ವರಪ್ಪ ಹಂಚಿನಾಳ ಅತಿಥಿಗಳಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷಸ್ಥಾನ ವಹಿಸಿದ್ದ ಪ್ರಗತಿಪರ ರೈತರಾದ ಶ್ರೀ ಜಿ.ಆರ್.ಓದುಗೌಡರ ಮಾತನಾಡಿ ಗದಗ ಜಿಲ್ಲೆಯಲ್ಲಿ ಗೋಡಂಬಿ ಬೆಳೆಗಾರರ ಸಂಘವನ್ನು ರಚಿಸಲಾಗುತ್ತಿದ್ದು, ಆಸಕ್ತ ರೈತರು ಸದಸ್ಯರಾಗಬೇಕೆಂದು ವಿನಂತಿಸಿದರು. ಈ ಕಾರ್ಯಕ್ರಮದಲ್ಲಿ ಗೋಡಂಬಿ ಬೆಳೆಯನ್ನು ಬೆಳೆಯಲು ಆಸಕ್ತಿ ಹೊಂದಿದ 250 ಕ್ಕೂ ಹೆಚ್ಚು ಜನ ರೈತರು ಭಾಗವಹಿಸಿದ್ದರು. ಕೃಷಿ ವಿಸ್ತರಣಾ ತಜ್ಞರಾದ ಶ್ರೀ ಎಸ್.ಎಚ್.ಆದಾಪೂರ ಸ್ವಾಗತಿಸಿದರು. ಸಸ್ಯ ಸಂರಕ್ಷಣಾ ತಜ್ಞರಾದ ಎಸ್.ಕೆ.ಮುದ್ಲಾಪೂರ ವಂದಿಸಿದರು. ಗೃಹ ವಿಜ್ಞಾನ ವಿಷಯ ತಜ್ಞರಾದ ಡಾ॥ ಸುಧಾ ರಾಯನಗೌಡರ ಕಾರ್ಯಕ್ರಮ ನಿರೂಪಿಸಿದರು.

## ವಿಶ್ವ ಪರಿಸರ ದಿನಾಚರಣೆ



ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ರಿಲೈಯನ್ಸ್ ಫೌಂಡೇಶನ್, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 05-06-2017 ರಂದು ಗದಗ ತಾಲೂಕಿನ ಬೆಳದಡಿ ಗ್ರಾಮದಲ್ಲಿ "ವಿಶ್ವ ಪರಿಸರ ದಿನಾಚರಣೆ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಿಸರ್ಗದೊಂದಿಗೆ ಜನರ ಸಂಪರ್ಕ ಎಂಬ 2017 ನೇ ಸಾಲಿನ ಘೋಷವಾಕ್ಯದೊಂದಿಗೆ ಆಚರಿಸಲ್ಪಡುತ್ತಿರುವ ಈ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಜೊತೆಗೆ ಶಾಲೆ ಮಕ್ಕಳಿಂದ ಗ್ರಾಮದ ಜನರಿಗೆ ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸಲು ಪಥ ಸಂಚಲನ ನಡೆಸಲಾಯಿತು.

ಕುಟುಂಬದ ಹಾಗೂ ಗ್ರಾಮದ ಪರಿಸರವನ್ನು ಸ್ವಚ್ಛವಾಗಿಡಲು ಮಕ್ಕಳಿಗೆ ಶಪಥವನ್ನು ಬೋಧಿಸಲಾಯಿತು. ನಂತರ ನಡೆದ ಸಮಾರಂಭದಲ್ಲಿ ರಿಲೈಯನ್ಸ್ ಫೌಂಡೇಶನ್‌ನ ಜಿಲ್ಲಾ ಮುಖ್ಯಸ್ಥರಾದ ಶ್ರೀ ಭಾಸ್ಕರಭಟ್ಟ ಜೋಶಿ ಅವರು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ರೈತರ ಪಾತ್ರ, ಸ್ವ-ಸಹಾಯ ಗುಂಪಿನ ಹಾಗೂ ರೈತ ಹಿತಾಸಕ್ತಿ ಗುಂಪುಗಳ ಪಾತ್ರದ ಬಗ್ಗೆ ಮಾತನಾಡಿದರು.



ಶ್ರೀ ಎಸ್.ಕೆ.ಮುದ್ಲಾಪೂರ, ವಿಷಯ ತಜ್ಞರು, ಕೆವಿಕೆ ಹುಲಕೋಟಿ ಇವರು ಕೃಷಿ ತ್ಯಾಜ್ಯವನ್ನು ಮರುಬಳಕೆ ಮಾಡಿ ಎರೆಹುಳು ಗೊಬ್ಬರ ತಯಾರಿಸುವ ಕುರಿತು ರೈತರಿಗೆ ಮಾಹಿತಿ ನೀಡಿದರು. ವಿಸ್ತರಣಾ ತಜ್ಞರಾದ ಶ್ರೀ ಎಸ್.ಎಚ್.ಆದಾಪೂರ ಇವರು ತೋಟಗಾರಿಕೆ ಹಾಗೂ ಅರಣ್ಯ ಗಿಡ ಮರಗಳನ್ನು ರೈತರ ಹೊಲದಲ್ಲಿ ಬೆಳೆಯಲು ಸರಕಾರದ ಯೋಜನೆಗಳ ಬಗ್ಗೆ ಮಾತನಾಡಿದರು. ಇನ್ನೋರ್ವ ವಿಷಯ ತಜ್ಞರಾದ ಶ್ರೀ ನಾರಾಯಣ ಭಂಡಿ ಇವರು ಮಣ್ಣು ಹಾಗೂ ನೀರು ಸಂರಕ್ಷಣೆ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಧರ್ಮಣ್ಣ ಲಮಾಣಿ, ಶಾಲೆಯ ಮುಖ್ಯೋಪಾಧ್ಯಯರಾದ ಶ್ರೀ ಶಂಕರಗೌಡ, ಶಿಕ್ಷಕರಾದ ಶ್ರೀಮತಿ ಎಸ್.ಬಿ.ಹೂಗಾರ, ಶ್ರೀಮತಿ ಶಾರದಾ ಅಗಸಿಮನಿ, ಶ್ರೀಮತಿ ವಿ.ಆರ್.ಭಾಗವತ್ ಇವರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ 120 ಕ್ಕೂ ಹೆಚ್ಚು ಜನ ರೈತರು, ರೈತ ಮಹಿಳೆಯರು, ಮಹಿಳ ಸಾಮುಖ್ಯದ ಪ್ರತಿನಿಧಿಗಳು ಹಾಗೂ ವಿಸ್ತರಣಾ ಕಾರ್ಯಕರ್ತರು ಭಾಗವಹಿಸಿದ್ದರು.

## ಸಿರಿಧಾನ್ಯಗಳ ಮೇಳ

ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯಲ್ಲಿ ಸಿರಿಧಾನ್ಯಗಳ ಮೇಳವನ್ನು ದಿನಾಂಕ 27-05-2017 ರಂದು ಏರ್ಪಡಿಸಲಾಗಿತ್ತು. ಈ ಮೇಳದಲ್ಲಿ ವಸ್ತುಪ್ರದರ್ಶನ ಹಾಗೂ ಆರೋಗ್ಯಕರ ಜೀವನಕ್ಕಾಗಿ ಉತ್ತಮ ಆಹಾರ ಕುರಿತು ವಿಶೇಷ ತರಬೇತಿಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಶಕುಂತಲಾ ರವಿ ಮೂಲಿಮನಿ, ಜಿಲ್ಲಾ ಪಂಚಾಯತ ಸದಸ್ಯರು, ಗದಗ ಜಿಲ್ಲೆ ಇವರು ನೆರವೇರಿಸಿ, ಆರೋಗ್ಯಕರ ಜೀವನಕ್ಕಾಗಿ ಸಿರಿಧಾನ್ಯಗಳಿಂದ ತಯಾರಿಸಿದ ಆಹಾರವನ್ನು ಸೇವಿಸಬೇಕು ಎಂದು ತಿಳಿಸಿದರು.





ಅತಿಥಿಗಳಾಗಿ ಶ್ರೀಮತಿ ಆಶಾ ಡಿ. ಓದುಗೌಡರ, ಪ್ರಗತಿಪರ ರೈತಮಹಿಳೆ ಇವರು ಭಾಗವಹಿಸಿದ್ದರು. ಅಧ್ಯಕ್ಷ ಸ್ಥಾನವನ್ನು ಶ್ರೀಮತಿ ಸರೋಜಾ ಮೋಹನ ದಾಸರಡ್ಡಿ ಅವರು ವಹಿಸಿಕೊಂಡು ಸಧೃಡ ಆರೋಗ್ಯಕ್ಕೆ ಪೌಷ್ಠಿಕ ಆಹಾರ ಅತ್ಯಗತ್ಯ. ಈ ನಿಟ್ಟಿನಲ್ಲಿ ಸಿರಿಧಾನ್ಯಗಳನ್ನು ಬೆಳೆಯುವುದರ ಜೊತೆಗೆ ದಿನ ನಿತ್ಯ ಆಹಾರದಲ್ಲಿ ಸೇವಿಸಬೇಕಾದ ಅಗತ್ಯತೆ ಇದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಆರೋಗ್ಯಕರ ಜೀವನಕ್ಕಾಗಿ ಉತ್ತಮ ಆಹಾರ ಕುರಿತು ತರಬೇತಿಯನ್ನು ಕೃಷಿ ವಿಜ್ಞಾನ ಕೆಂದ್ರದ ಡಾ॥ ಸುಧಾ ರಾಯನಗೌಡರ, ಗೃಹ ವಿಜ್ಞಾನ ತಜ್ಞರು ನಡೆಸಿಕೊಟ್ಟರು. ಜೊತೆಗೆ ದಿನನಿತ್ಯ ಆಹಾರದಲ್ಲಿ ಸಿರಿಧಾನ್ಯಗಳು ಹಾಗೂ ಅವುಗಳಿಂದ ತಯಾರಿಸಬಹುದಾದ ಹಲವಾರು ಮೌಲ್ಯವರ್ಧಿತ ಪದಾರ್ಥಗಳ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸಿರಿಧಾನ್ಯಗಳಾದ ನವಣೆ, ಸಾಮೆ, ನವಣೆ ರವೆ, ನವಣೆ ಡಯಾಬಿಟಿಕ್ ಆಹಾರಗಳ ಮಾರಾಟದ ವ್ಯವಸ್ಥೆಯನ್ನು ಕೂಡಾ ಮಾಡಲಾಗಿತ್ತು. ಬಿತ್ತನೆಗೆ ನವಣೆ ಹಾಗೂ ಸಾಮೆ ಬೀಜಗಳ ಮಾರಾಟವನ್ನು ಕೂಡ ಈ ಮೇಳದಲ್ಲಿ ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಆರೋಗ್ಯಕರ ಜೀವನಕ್ಕಾಗಿ ಉತ್ತಮ ಆಹಾರ ಕುರಿತು ಹಸ್ತ ಪ್ರತಿಯನ್ನು ಶಿಬಿರಾರ್ಥಿಗಳಿಗೆ ನೀಡಲಾಯಿತು.



## ನೈಸರ್ಗಿಕ ಕೃಷಿ ಕಾರ್ಯಾಗಾರ ಹಾಗೂ ಮುಂಗಾರು ಹಂಗಾಮಿನ ಬೀಜ ದಿನೋತ್ಸವ

ಹುಲಕೋಟಿಯ ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದದಲ್ಲಿ ದಿನಾಂಕ 28-05-2017 ರಂದು ನೈಸರ್ಗಿಕ ಕೃಷಿ ಕರಿತು ಕಾರ್ಯಾಗಾರ ಹಾಗೂ ಮುಂಗಾರು ಹಂಗಾಮಿನ ಬೀಜಗಳ ದಿನೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಾಗಾರವನ್ನು ಉದ್ಘಾಟಿಸಿ ಶ್ರೀ ಡಿ.ಆರ್.ಪಾಟೀಲ,





ಮಾಜಿ ಶಾಸಕರು ಇವರು ಮಾತನಾಡಿ ರಾಸಾಯನಿಕ ಮುಕ್ತ ಆಹಾರದ ಉತ್ಪಾದನೆಗಾಗಿ ರೈತರು "ನೈಸರ್ಗಿಕ ಕೃಷಿ" ವಿಧಾನವನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಮೇಲಿಂದ ಮೇಲೆ ಬರ ಬೀಳುವ ಗದಗ ಜಿಲ್ಲೆಗೆ ನೈಸರ್ಗಿಕ ಕೃಷಿ ಪದ್ಧತಿ ಅನುಸರಿಸುವುದರಿಂದ ಬೆಳೆ ಉತ್ಪಾದನೆಯಲ್ಲಿ ಸ್ಥಿರತೆ ಹಾಗೂ ಜೀವನೋಪಾಯದ ಭದ್ರತೆ ಕಂಡುಕೊಳ್ಳಬಹುದೆಂದು ತಿಳಿಸಿದರು. ಮುಂದುವರೆದು ಮಾತನಾಡಿದ ಅವರು ರೈತರು ಸಿರಿಧಾನ್ಯಗಳನ್ನು ಹೆಚ್ಚಿನ ಕ್ಷೇತ್ರದಲ್ಲಿ ಬೆಳೆಯುವುದರ ಜೊತೆಗೆ ಅವುಗಳ ಮೌಲ್ಯವರ್ಧನೆ ಚಟುವಟಿಕೆಯಲ್ಲಿ ತೊಡಗಿಸಕೊಳ್ಳಬೇಕೆಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಪ್ರಸನ್ನಮೂರ್ತಿ, ನೈಸರ್ಗಿಕ ಕೃಷಿ ಪರಿಣಿತರು, ತುಮಕೂರು ಇವರು ನೈಸರ್ಗಿಕ ಕೃಷಿ ತತ್ವಗಳು ಹಾಗೂ ನೈಸರ್ಗಿಕ ಕೃಷಿ ಪದ್ಧತಿ ಅನುಸರಿಸುವದರಿಂದ ಆಗುವ ಪ್ರಯೋಜನಗಳ ಬಗ್ಗೆ ಹೇಳಿದರು. ವಿವಿಧ ಬೆಳೆಗಳಲ್ಲಿ ನೈಸರ್ಗಿಕ ಕೃಷಿ ಪದ್ಧತಿ ಬಗ್ಗೆ ರೈತರಿಗೆ ವಿವರವಾದ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ತಜ್ಞರು ಮುಂಗಾರು ಹಂಗಾಮಿನ ಸುಧಾರಿತ ಬೀಜಗಳ ಉಪಯೋಗದ ಬಗ್ಗೆ ಮಾಹಿತಿ ನೀಡಿದರು. ರೈತರಿಗೆ ಕೆವಿಕೆಯಲ್ಲಿ ಸುಧಾರಿತ ಹೆಸರು, ಈರುಳ್ಳಿ, ನವಣೆ, ಹವೀಜ ಬೀಜಗಳ ಲಭ್ಯತೆ ಬಗ್ಗೆ ತಿಳಿಸಲಾಯಿತು. ಈ ನಿಮಿತ್ತ ಸುಧಾರಿತ ಬೀಜಗಳ ವಸ್ತು ಪ್ರದರ್ಶನ ಹಾಗೂ ಮಾರಾಟವನ್ನು ಏರ್ಪಡಿಸಲಾಗಿತ್ತು.



ಸಮಾರಂಭದಲ್ಲಿ ಡಾ|| ಪ್ರಕಾಶ ಭಟ್, ಗ್ರಾಮೀಣ ಅಭಿವೃದ್ಧಿ ತಜ್ಞರು, ಶ್ರೀ ಜೆ.ಕೆ.ಜಮಾದಾರ, ಪತ್ರಕರ್ತರು ಉಪಸ್ಥಿತರಿದ್ದರು. ಕೆವಿಕೆ ಮುಖ್ಯಸ್ಥರಾದ ಡಾ|| ಎಲ್.ಜಿ.ಹಿರೇಗೌಡರ ಇವರು ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತಜ್ಞರಾದ ಎಸ್.ಕೆ.ಮುದ್ಲಾಪೂರ ವಂದಿಸಿದರು. ಸಮಾರಂಭದಲ್ಲಿ 350 ಕ್ಕೂ ಹೆಚ್ಚು ಜನ ರೈತರು ಭಾಗವಹಿಸಿದ್ದರು.

## ಜಿಲ್ಲೆಯ ರೈತರಿಗೆ ದೊರೆತ ಪ್ರಶಸ್ತಿಗಳು

- ಗದಗ ತಾಲೂಕಿನ ಹುಲಕೋಟಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ವಿಶ್ವನಾಥಗೌಡ ಜಿ. ಹಿರೇಗೌಡರ  ಇವರಿಗೆ ಕೃಷಿ ಹಾಗೂ ತೋಟಗಾರಿಕೆ ಬೆಳೆಯಲ್ಲಿ ಮಾಡಿದ ವಿಶೇಷ ಸಾಧನೆಗೆ ರಾಜ್ಯ ಮಟ್ಟದ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿ 2015-16 ಸಾಲಿಗೆ ಲಭಿಸಿದೆ. ಈ ಪ್ರಶಸ್ತಿಯನ್ನು ಜೂನ್ 21, 2017 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ ಇವರಿಂದ ಸ್ವೀಕರಿಸಿರುವರು.
- ಗದಗ ತಾಲೂಕಿನ ಶ್ಯಾಗೋಟಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಅಶೋಕ ಹಳ್ಳಿ ಇವರು ಸಮಗ್ರ ಕೃಷಿ ಪದ್ಧತಿ ಮುಖ್ಯವಾಗಿ ತೋಟಗಾರಿಕೆ, ಹೈನುಗಾರಿಕೆ, ಸಾವಯವ ಕೃಷಿ, ಗೊಬ್ಬರಗ್ಯಾಸ, ಸಿರಿಧಾನ್ಯಗಳ ಬೇಸಾಯ ಇತ್ಯಾದಿ ಅಳವಡಿಸಿ ಕಡಿಮೆ ಕ್ಷೇತ್ರದಲ್ಲಿ ಹೆಚ್ಚು ಆದಾಯ ಪಡೆದ ರೈತರಾಗಿದ್ದಾರೆ. ಇವರ ಕಾರ್ಯಗಳನ್ನು ಪರಿಗಣಿಸಿ 2015-16 ನೇ ಸಾಲಿನಲ್ಲಿ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿಯನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ ಇವರಿಂದ ಜೂನ 21, 2017 ರಂದು ಸ್ವೀಕರಿಸಿರುವರು.

## ದ್ವೈಮಾಸಿಕ ಸಭೆ ಹಾಗೂ ಆತ್ಮ ಸಭೆ

ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಗದಗ, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಹಾಗೂ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಇವರ ವತಿಯಿಂದ ಜೂನ್ 23, 2017 ರಂದು ದ್ವೈಮಾಸಿಕ ಸಭೆ ಹಾಗೂ ಆತ್ಮಾ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಸಭೆಯನ್ನು ಏರ್ಪಡಿಸಲಾಯಿತು. ಈ ಸಭೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ವಿಶ್ವ ವಿದ್ಯಾಲಯದ ಸಹ-ವಿಸ್ತರಣಾ ನಿರ್ದೇಶಕರು, ಕೇಂದ್ರದ ವಿಜ್ಞಾನಿಗಳು, ವಿಸ್ತರಣಾ ಕಾರ್ಯಕರ್ತರು ಹಾಗೂ ಆತ್ಮಾ ಸಿಬ್ಬಂದಿ ಭಾಗವಹಿಸಿ ಮುಂಗಾರಿ ಹಾಗೂ ಹಿಂಗಾರಿ ಬೆಳೆಗಳ ರೋಗ ಹಾಗೂ ಕೀಟದ ಬಾಧೆ, ಮಳೆ ವಿವರ, ಕೃಷಿ ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು ಹಾಗೂ ವಿವಿಧ ಪರಿಹಾರಗಳನ್ನು ಸೂಚಿಸಲಾಯಿತು.

## ಕೃಷಿ  ವಿದ್ಯಾರ್ಥಿಗಳ ಗ್ರಾಮೀಣ ಕಾರ್ಯನುಭವ ಕಾರ್ಯಕ್ರಮಗಳು

ಕೃಷಿ ಮಹಾವಿದ್ಯಾಲಯ ಕಲಬುರ್ಗಿಯಿಂದ, 26 ಜನ ಕೃಷಿ ವಿದ್ಯಾರ್ಥಿಗಳು, ದಿನಾಂಕ 19/06/2017 ರಿಂದ 24/06/2017 ರವರೆಗೆ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ಗ್ರಾಮೀಣ ಕಾರ್ಯನುಭವ ಹಾಗೂ ಕೇಂದ್ರದ ಚಟುವಟಿಕೆಗಳ ಕುರಿತು ತರಬೇತಿಯನ್ನು ಪಡೆದರು.

## ಕ್ಷೇತ್ರ ಪ್ರಯೋಗಗಳು 2017-18

1) ಅಧಿಕ ಇಳುವರಿಗಾಗಿ ತೊಗರಿ (ಟಿ.ಎಸ್-3ಆರ್)+ ಹೆಸರು (ಡಿ.ಜಿ.ಜಿ.ವಿ-2) ಮತ್ತು ತೊಗರಿ (ಟಿ.ಎಸ್-3ಆರ್) + ಉದ್ದು (ಡಿ.ಯು-1) ಬೆಳೆಗಳ ತಂತ್ರಜ್ಞಾನ ಪರಿಶೀಲನೆಯನ್ನು ಕೊಚಲಾಪೂರ (ರೋಣ ತಾಲೂಕು) ಗ್ರಾಮದ 3 ಜನ ರೈತರ ಹೊಲಗಳಲ್ಲಿ ಹಮ್ಮಿಕೊಳ್ಳಲಾಯಿತು.

2) ಅಧಿಕ ಇಳುವರಿ ಹಾಗೂ ಅಧಿಕ ಲಾಭ ಪಡೆಯಲು ಬಿ.ಟಿ ಹತ್ತಿ + ಹೆಸರು (ಡಿ.ಜಿ.ಜಿ.ವ್ಹಿ-2) ಮಿಶ್ರ ಬೆಳೆಯಲ್ಲಿ 1:1 ಹಾಗೂ 1:2 ಅಂತರ ಬೆಳೆಯ ಪ್ರಯೋಗವನ್ನು ರೋಣ ತಾಲೂಕಿನ ಕೊಚಲಾಪೂರ ಗ್ರಾಮದ 3 ಜನ ರೈತರ ಹೊಲಗಳಲ್ಲಿ ಹಮ್ಮಿಕೊಳ್ಳಲಾಯಿತು.

## ಮುಂಚೂಣಿ ಪ್ರಾತ್ಯಕ್ಷಿಕೆಗಳು

- ರೋಣ ತಾಲೂಕಿನ ಕೊಚಲಾಪೂರ ಗ್ರಾಮದಲ್ಲಿ ಹಬ್ಬು ಶೇಂಗಾ (ಕೆ.ಡಿ.ಜಿ-123) ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಕುರಿತು 3 ಜನ ರೈತರ ಹೊಲಗಳಲ್ಲಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು.
- ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ, ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ ಅಡಿ ತೊಗರಿ ಬೆಳೆಯ ಟಿ.ಎಸ್.3-ಆರ್ ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಕುರಿತು ರೋಣ ತಾಲೂಕು ಕೊಚಲಾಪೂರ ಗ್ರಾಮದಲ್ಲಿ 20 ಪ್ರಾತ್ಯಕ್ಷಿಕೆಗಳನ್ನು 8 ಹೆಕ್ಟೇರ್ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಯಿತು.
- ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶೇಂಗಾ ಬೆಳೆಯ ಜಿ2-52 ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು 75 ಪ್ರಾತ್ಯಕ್ಷಿಕೆಗಳನ್ನು 30 ಹೆಕ್ಟೇರ ಕ್ಷೇತ್ರದಲ್ಲಿ ರೋಣ ತಾಲೂಕಿನ ಜಕ್ಕಲಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು.

## ತರಬೇತಿಗಳು

- ಎಪ್ರಿಲ್ 19,20,21 : ಒಣ ಬೇಸಾಯದಲ್ಲಿ ತೋಟಗಾರಿಕೆ ಕುರಿತು ಮಹಾಲಿಂಗಪೂರ (ಗದಗ ತಾಲೂಕು), ನವೇಭಾವನೂರು ಹಾಗೂ ಚಿಕ್ಕ ಸವಣೂರು (ಶಿರಹಟ್ಟಿ ತಾಲೂಕು) ಗ್ರಾಮಗಳಲ್ಲಿ 164 ಜನ ರೈತರಿಗೆ 3 ತರಬೇತಿಗಳನ್ನು ಆಯೋಜಿಸಲಾಯಿತು.
- ಎಪ್ರಿಲ್ 20 & 22, 2017: ಮಣ್ಣು ಪರೀಕ್ಷೆಗಾಗಿ ಮಣ್ಣು ಮಾದರಿ ಸಂಗ್ರಹಣೆ ಪದ್ಧತಿಗಳ ಕುರಿತು ಗದಗ ತಾಲೂಕಿನ ಅಸುಂಡಿ ಹಾಗೂ ಬಿಂಕದಕಟ್ಟಿ ಗ್ರಾಮದಲ್ಲಿ 2 ತರಬೇತಿಗಳನ್ನು 69 ಜನ ರೈತರಿಗೆ ಆಯೋಜಿಸಲಾಯಿತು.
- ಎಪ್ರಿಲ್ 26, 2017: ಗದಗ ತಾಲೂಕಿನ ಹಿರೇಹಂದಿಗೋಳ ಗ್ರಾಮದಲ್ಲಿ ಮಣ್ಣಿನ ತೇವಾಂಶ ಕಾಯ್ದುಕೊಳ್ಳುವ ತಂತ್ರಜ್ಞಾನಗಳ ಕುರಿತು 25 ಜನ ರೈತರಿಗೆ ತರಬೇತಿಯನ್ನು ಆಯೋಜಿಸಲಾಯಿತು.
- ಎಪ್ರಿಲ-ಮೇ 2017: ವೈಜ್ಞಾನಿಕ ಹೈನುಗಾರಿಕೆ ಕುರಿತು 332 ಜನ ಯುವಕ ಹಾಗೂ ಯುವತಿಯರಿಗೆ ಆರು ದಿನಗ ಅವಧಿಯ 8 ತರಬೇತಿಗಳನ್ನು ಹಮ್ಮಿಕೊಳ್ಳಲಾಯಿತು.
- ಮೇ 9, 2017: ಮಣ್ಣು ಮತ್ತು ನೀರು ಸಂರಕ್ಷಣೆ ಕುರಿತು 68 ಜನ ರೈತರಿಗೆ ಒಂದು ದಿನದ ತರಬೇತಿಯನ್ನು ಕೇಂದ್ರದಲ್ಲಿ ಆಯೋಜಿಸಲಾಯಿತು.
- ಮೇ 22, 2017: ಗದಗ ತಾಲೂಕಿನ ಬಿಂಕದಕಟ್ಟಿ ಗ್ರಾಮದ ಸ್ವ-ಸಹಾಯ ಗುಂಪಿನ 31 ಜನ ಮಹಿಳೆಯರಿಗೆ ಆರೋಗ್ಯಕರ ಜೀವನಕ್ಕಾಗಿ ಉತ್ತಮ ಆಹಾರಗಳು ಕುರಿತು ಒಂದು ದಿನದ ತರಬೇತಿಯನ್ನು ಆಯೋಜಿಸಲಾಯಿತು. ತರಬೇತಿಯ ಜೊತೆಗೆ ವಿವಿಧ ಸಿರಿಧಾನ್ಯಗಳು ಹಾಗೂ ಮೌಲ್ಯವರ್ಧಿತ ಪದಾರ್ಥಗಳ ವಸ್ತುಪ್ರದರ್ಶನವನ್ನು ಏರ್ಪಡಿಸಲಾಯಿತು.

- ಮೇ 25 ಮತ್ತು ಜೂನ್ 24, 2017: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿರಹಟ್ಟಿ ತಾಲೂಕು, ಲಕ್ಷ್ಮೇಶ್ವರ ಹಾಗೂ ಯಳವತ್ತಿ ಸರ್ಕಲದಲ್ಲಿ ಕಾರ್ಯ ನಿರ್ವಹಿಸುತ್ತಿರುವ 57 ಜನ ಅಂಗನವಾಡಿ ಶಿಕ್ಷಕಿಯರಿಗೆ ಆಹಾರ, ಆರೋಗ್ಯ, ಪೌಷ್ಟಿಕತೆ ಹಾಗೂ ಸಿರಿಧಾನ್ಯಗಳ ಮಹತ್ವ ಕುರಿತು ತರಬೇತಿಗಳನ್ನು ಆಯೋಜಿಸಲಾಯಿತು.
- ಮೇ 2017: ಶಿರಹಟ್ಟಿ ತಾಲೂಕಿನ ಮಾಡೊಳ್ಳಿ ಗ್ರಾಮದಲ್ಲಿ ಮುಂಗಾರಿ ಬೆಳೆಯ ತಾಂತ್ರಿಕತೆ ಕುರಿತು 66 ಜನ ರೈತರಿಗೆ ತರಬೇತಿಯನ್ನು ಆಯೋಜಿಸಲಾಯಿತು.
- ಜೂನ್ 23, 2017: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರ ಸಹಯೋಗದೊಂದಿಗೆ ರೋಣ ತಾಲೂಕಿನ ಮುಶಿಗೇರಿ ಗ್ರಾಮದಲ್ಲಿ ಪಶು ಸಂಗೋಪನೆ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪಶು ಸಂಗೋಪನೆ ಕುರಿತು ಕೇಂದ್ರದಿಂದ ತರಬೇತಿಯನ್ನು ನೀಡಲಾಯಿತು.
- ಜೂನ್ 25, 2017: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಡಿ ಸಾವಯವ ಕೃಷಿ ಹಾಗೂ ಪರಿಕರಗಳ ತಯಾರಿಕೆ ಕುರಿತು ಹಮ್ಮಿಕೊಂಡ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ತಜ್ಞರಾದ ಶ್ರೀ ಎಸ್.ಕೆ.ಮುದ್ಲಾಪೂರ ಇವರು ಜೀವಾಮೃತ ತಯಾರಿಕೆ ಮತ್ತು ಎರೆಹುಳು ತಯಾರಿಕೆ ಕುರಿತು ತರಬೇತಿ ಹಾಗೂ ಪ್ರಾತ್ಯಕ್ಷಿಕೆಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ 310 ಜನ ರೈತ ಮಹಿಳೆಯರು, 48 ಜನ ರೈತರು ಹಾಗೂ 4 ಜನ ವಿಸ್ತರಣಾ ಸಿಬ್ಬಂದಿ ಭಾಗವಹಿಸಿದ್ದರು.

## ಕೇಂದ್ರದ ಸಿಬ್ಬಂದಿ ತರಬೇತಿ / ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿವರ

- ಎಪ್ರಿಲ್ 28, 2017 ರಂದ ಕೆವಿಕೆಯ ವಿಷಯ ತಜ್ಞರಾದ ಶ್ರೀ ಎನ್.ಎಚ್.ಭಂಡಿ ಹಾಗೂ ಶ್ರೀ ಕೆ.ಟಿ.ಪಾಟೀಲ ಇವರು ಅರಣ್ಯ ಇಲಾಖೆ, ಗದಗ ಇವರು ಏರ್ಪಡಿಸಿದ ಕೃಷಿ ಅರಣ್ಯೀಕರಣ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದರು.
- ಮೇ 3-5, 2017 : ವಲಯ 8 ರ ಅಡಿ ಕಾರ್ಯನಿರ್ವಹಿಸುತ್ತಿರುವ ಕೃಷಿ ವಿಜ್ಞಾನ ಕೇಂದ್ರಗಳ 2016-17 ನೇ ಸಾಲಿನ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯನ್ನು ಐ.ಸಿ.ಎ.ಆರ್-ಕೆವಿಕೆ, ಗೋವಾದಲ್ಲಿ ಆಯೋಜಿಸಲಾಗಿತ್ತು. ಈ ಸಭೆಗೆ ಕೇಂದ್ರದ ಕೃಷಿ ವಿಸ್ತರಣೆ ತಜ್ಞರಾದ ಶ್ರೀ ಎಸ್.ಎಚ್.ಆದಾಪೂರ ಭಾಗವಹಿಸಿ ಕೇಂದ್ರದ ಕಾರ್ಯಕ್ರಮಗಳ ಪ್ರಗತಿಯನ್ನು ಮಂಡನೆ ಮಾಡಿದರು.
- ಜೂನ್ 15-17, 2017 : ಶ್ರೀ ಕೆ.ಟಿ.ಪಾಟೀಲ, ವಿಷಯ ತಜ್ಞರು (ತೋಟಗಾರಿಕೆ) ಮತ್ತು ಶ್ರೀ ಸುರೇಶ ಹಳೇಮನಿ (ಫಾರ್ಮ ಮ್ಯಾನೇಜರ) ಇವರು ಗೋಡಂಬಿ ಹಾಗೂ ಕೊಕೊ ಬೆಳೆ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿನ ಇವರು ಏರ್ಪಡಿಸಿದ ಗೋಡಂಬಿ ಬೇಸಾಯದ ತರಬೇತಿಯನ್ನು ಪಡೆದಿರುವರು.


**ಪ್ರಧಾನ ಸಂಪಾದಕರು ಹಾಗೂ ಪ್ರಕಾಶಕರು:**
ಡಾ॥ ಎಲ್.ಜಿ.ಹಿರೇಗೌಡರ
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

**ಸಂಪಾದಕರು:**
ಡಾ॥ ಸುಧಾ ರಾಯನಗೌಡರ
ವಿಜ್ಞಾನಿಗಳು (ಗೃಹ ವಿಜ್ಞಾನ)

**ಕಾರ್ಯಕ್ರಮಗಳ ಸಂಯೋಜಕರು:**
ಶ್ರೀ ವ್ಹಿ.ಡಿ.ವೈಕುಂಠೆ, ವಿಜ್ಞಾನಿಗಳು (ಬೇಸಾಯ ಶಾಸ್ತ್ರ)
ಶ್ರೀ ಕೆ.ಟಿ.ಪಾಟೀಲ, ವಿಜ್ಞಾನಿಗಳು (ತೋಟಗಾರಿಕೆ)
ಶ್ರೀ ಎಸ್.ಎಚ್. ಆದಾಪೂರ, ವಿಜ್ಞಾನಿಗಳು (ಕೃಷಿ ವಿಸ್ತರಣೆ)
ಶ್ರೀ ಎಸ್.ಕೆ.ಮುದ್ಲಾಪೂರ, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ)
ಶ್ರೀ ಎನ್.ಎಚ್.ಭಂಡಿ, ವಿಜ್ಞಾನಿಗಳು (ಮಣ್ಣು ವಿಜ್ಞಾನ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಡಾ॥ ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

**ವಿನ್ಯಾಸ ಹಾಗೂ ಅಕ್ಷರ ಜೋಡಣೆ:**
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

**ಸಹಾಯ:**
ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ,
ಹುಲಕೋಟಿ-582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: (08372)289606, ಇ-ಅಂಚೆ:kvkhulkoti@gmail.com, ಅಂತರ್ಜಾಲ: www.khpkvk.org